ಶಿವಮೊಗ್ಗ	
ಶಿವಮೊಗ್ಗ	1435
ಹೊಸನಗರ	84
ಶಿಕಾರಿಪುರ	190
ಸಾಗರ	89
ಸೊರಬ	47
ಭದ್ರಾವತಿ	1243
ತೀರ್ಥಹಳ್ಳಿ	61
ಒಟ್ಟು	3175
ಚಿಕ್ಕಮಗಳೂರು	
ಚಿಕ್ಕಮಗಳೂರು	1050
ಕಡೂರು	6563
ತರೀಕೆರೆ	2793
ಒಟ್ಟು	10135

ರಾಜ್ಯದಲ್ಲಿ ತೆಂಗು ನುಸಿ ಪೀಡೆಗೆ ಸರಬರಾಜು ಮಾಡಿದ ಔಷಧಿ

208 (1781)- ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ತೆಂಗಿನ ನುಸಿಪೀಡೆ ಕಳೆಯಲು ಯಾವಾಗ ನಿರ್ಧಾರ ತೆಗೆದುಕೊಳ್ಳ ಲಾಯಿತು?

ಆ. ಹಾಗಿದ್ದಲ್ಲಿ, ಎಷ್ಟು ಕೋಟಿ ರೂ.ಗಳ ಔಷಧ ಕೊಳ್ಳಲಾಯಿತು?

ಇ. ಈ ಔಷಧವನ್ನು ಯಾವ ಯಾವ ಏಜೆನ್ಸಿ ಮೂಲಕ ಕೊಳ್ಳಲಾಯಿತು?

ಈ. ಇದುವರೆವಿಗೆ ಔಷಧವನ್ನು ಯಾವ ರೀತಿ ರೈತನಿಗೆ ನೀಡಲಾಗಿದೆ?

ಉ. ಕೊಟ್ಟ ಔಷಧ ಸಮರ್ಪಕವಾಗಿ ಕೆಲಸ ಮಾಡಿದೆಯೇ?

ಊ. ಔಷಧ ಹಾಕಿದ ನಂತರ ಎಷ್ಟು ಮರಗಳು ಹಾಳಾಗಿ ಕಡಿಯಲಾಗಿದೆ?

ಋ. ಸರ್ಕಾರ ಕಳಪೆ ಔಷಧ ಖರೀದಿ ಮಾಡಲು ಕಾರಣವೇನು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು)

ಅ. 1999-2000ನೇ ಸಾಲಿನ ಫೆಬ್ರುವರಿ 2000ನೇ ಮಾಹೆಯಲ್ಲಿ

ಆ. ನುಸಿಪೀಡೆ ನಿಯಂತ್ರಣಕ್ಕೆ 1999-2000ನೇ ಸಾಲಿನಲ್ಲಿ ರೂ.2.40 ಕೋಟಿ ಹಾಗೂ 2001-02ನೇ ಸಾಲಿನಲ್ಲಿ ರೂ. 9.60 ಕೋಟಿಗಳಿಗೆ ಔಷಧಿಗಳನ್ನು ಖರೀದಿಸಲಾಗಿದೆ.

ಇ. ಈ ಔಷಧವನ್ನು 3 ಏಜೆನ್ಸಿಗಳಾದ ಕರ್ನಾಟಕ ತೋಟಗಾರಿಕಾ ಮಹಾಮಂಡಳ, ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾ ಮಂಡಳಿಗಳ ಮುಖಾಂತರ ಖರೀದಿಸಲಾಗಿದೆ.

ಈ. ಈ ಔಷಧಿಗಳನ್ನು 1999-2000ನೇ ಸಾಲಿನಲ್ಲಿ ಶೇ.50ರ ರಿಯಾಯಿತಿ ದರದಲ್ಲಿ ಮತ್ತು 2001-02ನೇ ಸಾಲಿನಲ್ಲಿ ಉಚಿತವಾಗಿ ವಿತರಿಸಲಾಗಿದೆ.

ಉ. ಹೌದು

ಊ. ಔಷಧ ಹಾಕಿದ ನಂತರ ಮಕಗಳು ಹಾಳಾಗಿರುವುದಿಲ್ಲ.

ಋ. ಕಳಪೆ ಔಷಧಯನ್ನು ಖರೀದಿಸಿರುವುದಿಲ್ಲ.

ರಾಜ್ಯದಲ್ಲಿ ಬೀಟಿ ಹತ್ತಿ ತಳಿಯ ಬಗ್ಗೆ

209 (1716)- ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕದಲ್ಲಿ ಬೀಟಿ (BT) ಹತ್ತಿ ತಳಿಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆಯೇ?

ಆ. ಬೀಟಿ ಹತ್ತಿ ತಳಿಯು ಅಪಾಯಕಾರಿ ಬೆಳೆ, ಇದು ರೈತರಿಗೆ ಹಾನಿ ಉಂಟುಮಾಡುತ್ತದೆ ಎಂಬ ವದಂತಿಗಳಿದ್ದು ಇದರ ಸಾರ್ವಜನಿಕರಿಂದ ಸಾಕಷ್ಟು ವಿರೋಧಗಳು ಬಂದಿರುವುದು ನಿಜವೇ?

ಇ. ರಾಜ್ಯದಲ್ಲಿ ಈ ಬೆಳೆ ಬೆಳೆದಲ್ಲಿ ಹಾಗೂ ಅಭಿವೃದ್ಧಿ ಪಡಿಸಿದಲ್ಲಿ ರಾಜ್ಯದ ರೈತರಿಗಾಗುವ ತೊಂದರೆಗಳೇನು ಮತ್ತು ಲಾಭಗಳೇನು?

ಈ. ಹಾಗಿದ್ದರೆ, ತಳಿಯನ್ನು ಅಭಿವೃದ್ಧಿ ಪಡಿಸುವ ಬೆಳೆಯನ್ನು ಬೆಳೆಯುವ ವಿಚಾರದಲ್ಲಿ ಸರ್ಕಾರ ಕೈಗೊಳ್ಳುವ ನಿರ್ಧಾರಗಳೇನು?

ಶ್ರೀ ವಿ.ಎಸ್.ಕೇಜಲಗಿ (ಕೃಷಿ ಸಚಿವರು)

ಅ. ಕೃಷಿ ವಿಶ್ವವಿದ್ಯಾನಿಲಯ ಧಾರವಾಡದಲ್ಲಿ ಬಿ.ಟಿ ಹತ್ತಿಯ ಬಗ್ಗೆ ಕೆಲವು ಪ್ರಯೋಗಗಳನ್ನು ನಡೆಸಲಾಗುತ್ತಿದೆ.

ಆ. ಕೆಲವು ರೈತ ಸಂಘಟನೆಗಳು ಬಿ.ಟಿ.ಹತ್ತಿಯ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಸುದ್ದಿ ಮಾಧ್ಯಮಗಳ ಮೂಲಕ ತಿಳಿದು ಬಂದಿರುತ್ತದೆ. ಆದರೆ ಎಲ್ಲಾ ಕಡೆಯಿಂದ ವ್ಯಾಪಕವಾದ ವಿರೋದವೇನೂ ಕಂಡು ಬಂದಿಲ್ಲ.

ಇ. ಬಿ.ಟಿ.ಹತ್ತಿ ಬೆಳೆಯುವುದರಿಂದ ರೈತರಿಗೆ ಆಗುವ ಮುಖ್ಯ ಲಾಭಗಳೇನಂದರೆ:

1. ಹತ್ತಿ ಬೆಳೆಯನ್ನು ಹೆಚ್ಚಾಗಿ ಭಾಧಿಸುವ ಕಾಯಿ ಕೊರಕ ಹುಳುವಿಗೆ ನಿರೋಧಕ ಶಕ್ತಿ ಇರುವುದರಿಂದ ಕೀಟನಾಶಕ ಬಳಕೆ ಪ್ರಮಾಣ ಕಡಿಮೆಯಾಗಿರುತ್ತದೆ. ಇದರಿಂದ ಬೇಸಾಯ ಖರ್ಚು ಕಡಿಮೆಯಾಗುತ್ತದೆ.

2. ಬಿ.ಟಿ.ಹತ್ತಿ ಬೆಳೆಯುವುದರಿಂದ ಇತರೇ ಪ್ರಾಣಿ ಮನುಷ್ಯ, ಸಸ್ಯ ಹಾಗೂ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಇರುವುದಿಲ್ಲ.

3. ಬಿ.ಟಿ.ಹತ್ತಿ ಬೆಳೆಯುವುದರಿಂದ ಹೆಚ್ಚು ಇಳುವರಿ ಪಡೆದು ಅಧಿಕ ಲಾಭಗಳಿಸಲು ರೈತರಿಗೆ ಅನುಕೂಲವಾಗುತ್ತದೆ.

4. ಸಮಗ್ರ ಪೀಡ ಹತ್ತೋಟಿ ಪದ್ಧತಿಯಲ್ಲಿ ಹೊಂದಿಕೊಳ್ಳುವುದರಿಂದ ಸುಲಭವಾಗಿ ಅಳವಡಿಸಿಕೊಳ್ಳಬಹುದು.